| | | | |
|---|---|---|---|
| | | ಸದರಿ ಒಂಟಿ ಮನೆ ಅರ್ಜಿಗಳ ಬಗ್ಗೆ ಚರ್ಚಿಸಲಾಗಿ ನಿಯಮಾನುಸಾರ ಕ್ರಮವಹಿಸುವಂತೆ ಸಹಾಯಕ ಕಂದಾಯ ಅಧಿಕಾರಿಗಳಿಗೆ ತಿಳಿಸಲಾಯಿತು | |
| 7 | ವಾರ್ಡ್ ನಂ.195 ಕೋಣನಕುಂಟೆ ವ್ಯಾಪ್ತಿಯಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚುವ ಬಗ್ಗೆ | ಸದರಿ ವಿಷಯದ ಬಗ್ಗೆ ಚರ್ಚಿಸಲಾಗಿ ತುರ್ತಾಗಿ ರಸ್ತೆ ಗುಂಡಿ ಮುಚ್ಚಲು ಕ್ರಮವಹಿಸಿವಂತೆ ಸಹಾಯಕ ಅಭಿಯಂತರರಿಗೆ ಸೂಚಿಸಲಾಗಿತು | ಸಹಾಯಕ ಕಾರ್ಯಪಾಲಕ ಅಭಿಯಂತರರು |
| 8 | ನಂತರ ನೋಡಲ್ ಅಧಿಕಾರಿಗಳು ಮಾತನಾಡಿ ಮಾನ್ಯ ಆಯುಕ್ತರು ಕಳುಹಿಸಿರುವ ಸಂದೇಶವಾದ BBMP MyCity MyBudget 2021-22 ರ ಬಗ್ಗೆ ಪ್ರಸ್ತಾಪಿಸಿ ಜನಾಗ್ರಹದವರ ಸಹಯೋಗದೊಂದಿಗೆ ಪಾಲಿಕೆಯಲ್ಲಿ ಚಾಲ್ತಿಯಲ್ಲಿರುವ BBMP MyCity MyBudget ಯೋಜನೆಯಡಿಯಲ್ಲಿ ಈ ಬಾರಿ ಎರಡು ವಿಷಯಗಳಾದ Public Toilet and Footpath (ಸಾರ್ವಜನಿಕರ ಶೌಚಾಲಯ ಮತ್ತು ಪಾದಚಾರಿ ಮಾರ್ಗಗಳು) ವಿಚಾರವಾಗಿ ವಾರ್ಡ್‌ಗಳ ಸಾರ್ವಜನಿಕರಿಂದ ಮತ್ತು ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್‌ಗಳಿಂದ ಸಲಹೆ ಮತ್ತು ಸೂಚನೆಗಳನ್ನು ತಿಳಿಸಲು ಕೋರಿರುವುದನ್ನು ಸಭೆಗೆ ತಿಳಿದರು. ಈ ಬಗ್ಗೆ ಮಾನ್ಯ ಆಯುಕ್ತರು ಮತ್ತು ವಿಶೇಷ ಆಯುಕ್ತರು ಬಿಬಿಎಂಪಿ ರವರುಗಳು ಮುಂದಿನ ವಾರ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್‌ಗಳ ಜೊತೆ ವಿಡಿಯೋ ಸಂವಾದವನ್ನು ಕರೆದಿದ್ದು, ಮಾನ್ಯ ಆಯುಕ್ತರ ಸಂದೇಶವನ್ನು ಸಹ ತಮಗೆ ಕಳುಹಿಸಲಾಗಿದ್ದು, ಅದರಂತೆ ತಾವುಗಳು ತಮ್ಮ ಸಲಹೆ ಸೂಚನೆಗಳೊಂದಿಗೆ ವಿಡಿಯೋ ಸಂವಾದದಲ್ಲಿ ಪಾಲ್ಗೊಳ್ಳಲು ಸಭೆಯಲ್ಲಿ ಹಾಜರಿದ್ದ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್‌ಗಳ ಸದಸ್ಯರುಗಳನ್ನು ಕೋರಿದರು. ಅದಕ್ಕೆ ಸದರಿಯವರುಗಳು ಸಹಮತ ವ್ಯಕ್ತಪಡಿಸಿದರು. | | |

ಮೇಲ್ಕಂಡ ಎಲ್ಲಾ ವಿಷಯಗಳೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ವಂದನಾರ್ಪಣೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

ನೋಡೆಲ್ ಅಧಿಕಾರಿ
ವಾರ್ಡ್-195 ಬೃ.ಬೆಂ.ಮ.ಪಾಲಿಕೆ

Scanned with CamScanner

| ಕ್ರಮ ಸಂಖ್ಯೆ | ವಿಷಯಗಳು | ನಿರ್ಣಯ | ಕ್ರಮ ತೆಗೆದುಕೊಳ್ಳಬೇಕಾದ ಅಧಿಕಾರಿ |
|---|---|---|---|
| 3 | ವಾರ್ಡ್ 195 ರ ವ್ಯಾಪ್ತಿಯ ಮುಖ್ಯರಸ್ತೆಗಳಲ್ಲಿ ಸಂಗ್ರಹವಾಗುವ ಒಣ ಎಲೆಗಳನ್ನು ನಿರ್ವಹಣೆ ಆಗದಿರುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು | ಸದರಿ ವಿಷಯದ ಬಗ್ಗೆ ಚರ್ಚಿಸಲಾಗಿ ಸಭೆಯಲ್ಲಿ ಹಾಜರಿದ್ದ ಹಿರಿಯ ಆರೋಗ್ಯ ಅಧಿಕಾರಿಗೆ ಕೂಡಲೇ ಕ್ರಮ ಕೈಗೊಳ್ಳಲು ಸೂಚಿಸಲಾಗಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು, (ಘನತ್ಯಾಜ್ಯ) |
| 4 | ಆರ್.ಬಿ.ಐ ಬಡಾವಣೇಯ ಆಂಜನೇಯ ಸ್ವಾಮಿ ದೇವಾಲಯದ ಹಿಂಭಾಗದಲ್ಲಿ ಇರುವ ನೀಲಗಿರಿ ತೋಟವನ್ನು ಸ್ವಚ್ಛಗೊಳಿಸಿಕೊಡಲು ಆರ್.ಬಿ.ಐ ವೆಲ್‌ಫೇರ್ ಅಸೋಸಿಯೇಷನ್ ರವರು ಕೋರಿರುತ್ತಾರೆ. | ಸದರಿ ವಿಷಯದ ಬಗ್ಗೆ ಚರ್ಚಿಸಲಾಗಿ ಸದರಿ ಸ್ಥಳದ ಬಗ್ಗೆ ನ್ಯಾಯಾಲಯದಲ್ಲಿ ದಾವೆ ಇರುವುದರಿಂದ ಸೂಕ್ತ ಕಾನೂನು ಸಲಹೆಗಾಗಿ ಕಡತ ಮಂಡಿಸಲು ಸೂಚಿಸಲಾಗಿದೆ | ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಕಿರಿಯ ಆರೋಗ್ಯ ಪರಿವೀಕ್ಷಕರು |
| 5 | ಪ್ರತಿನಿತ್ಯ ವಾರ್ಡ್ ನಂ.195 ವ್ಯಾಪ್ತಿಯಲ್ಲಿ ಸಂಗ್ರಹಣವಾಗುವ ಹಸಿ ಮತ್ತು ಒಣ ಕಸದ ವಿವರಗಳನ್ನು ನೀಡುವ ಬಗ್ಗೆ. | ಸದರಿ ವಿಷಯದ ಬಗ್ಗೆ ಚರ್ಚಿಸಲಾಗಿ ವಾರ್ಡ್ ನಂ.195 ಕೋಣನಕುಂಟೆ ವ್ಯಾಪ್ತಿಯು ಒಟ್ಟು 21 ಬ್ಲಾಕ್‌ನಿಂದ ಕೂಡಿದ್ದು ಅದರಲ್ಲಿ 21 ಬ್ಲಾಕ್‌ನಿಂದ ಹಸಿ ಕಸವು 8.50 ಟನ್ ಹಾಗೂ ಒಣ ಕಸವು 6.00 ಟನ್ ಸಂಗ್ರಹವಾಗುತ್ತಿರುವುದಾಗಿ ಕಿರಿಯ ಆರೋಗ್ಯ ಪರಿವೀಕ್ಷಕರು ತಿಳಿಸಿರುತ್ತಾರೆ ಹಾಗೂ ಸದರಿ ವಾರ್ಡ್‌ನ ರೋಡ್ ಐಡಿ ಪ್ರಕಾರ 110 ಪೌರಕಾರ್ಮಿಕರು ಕೆಲಸ ನಿರ್ವಹಿಸಬೇಕಾಗಿದ್ದು ಅದರಲ್ಲಿ ಕೇವಲ 58 ಪೌರಕಾರ್ಮಿಕರು ಕೆಲಸ ನಿರ್ವಹಿಸುತ್ತಿರುವುದಾಗಿ ಕಿರಿಯ ಆರೋಗ್ಯ ಪರಿವೀಕ್ಷಕರು ತಿಳಿಸಿರುವುದರಿಂದ ಉಳಿಕೆ ಪೌರಕಾರ್ಮಿಕರುಗಳನ್ನು ಪಡೆಯಲು ಸೂಕ್ತ ಕ್ರಮ ವಹಿಸುವಂತೆ ನೋಡಲ್ ಅಧಿಕಾರಿಗಳು ಸಂಬಂಧಪಟ್ಟವರಿಗೆ ಸೂಚಿಸಿರುತ್ತಾರೆ. | ಸಹಾಯಕ ಕಾರ್ಯಪಾಲಕ ಅಭಿಯಂತರರು, (ಘನತ್ಯಾಜ್ಯ) |
| 6 | ವಾರ್ಡ್ ನಂ.195 ಕೋಣನಕುಂಟೆ ವ್ಯಾಪ್ತಿಯಲ್ಲಿ ಒಂಟಿ ಮನೆ ಅರ್ಜಿ ನಿರ್ಮಾಣಕ್ಕಾಗಿ ಅರ್ಜಿಗಳು ಸಲ್ಲಿಕೆಯಾಗಿದ್ದು ಅದನ್ನು ವಿಲೇವಾರಿ ಮಾಡಲು ಕುರಿತು | 1. ಜ್ಯೋತಿ, ಚುಂಚಘಟ್ಟ<br>2. ಲಲಿತಮ್ಮ, ಚುಂಚಘಟ್ಟ<br>3. ಉಮಾಶಂಕರ್, ಕೃಷ್ಣನಗರ<br>4. ರಾಜಪ್ಪ, ಮೀನಾಕ್ಷಿಲ್ಯಾಬ್ ರಸ್ತೆ<br>5. ಗೌರಮ್ಮ, ಕೊತ್ತನೂರು<br>6. ಗೋಪಿಕೃಷ್ಣ, ಬೀರೇಶ್ವರನಗರ<br>7. ಹೆಚ್.ಎಂ.ಚಂದ್ರಪ್ಪ, ಚುಂಚಘಟ್ಟ<br>8. ಶಿವಲಿಂಗೇಗೌಡ, ಬೀರೇಶ್ವರನಗರ<br>9. ಮಿಥುನ್‌ಸಿಂಗ್,ಪಟ್ಟಮ್ಮಲೇಔಟ್<br>10. ರಮೇಶ್.ಸಿ, ಸಿದ್ದಪ್ಪ ಗಾರ್ಡನ್ | ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಸಹಾಯಕ ಕಂದಾಯ ಅಧಿಕಾರಿಗಳು |

Scanned with CamScanner

# ಸಭೆಯ ನಡಾವಳಿಗಳು

ದಿನಾಂಕ: 07-12-2020 ರ ಸಮಯ 11-00 ಗಂಟೆ ಪೂರ್ವಾಹ್ನದಂದು ವಾರ್ಡ್ ಸಂಖ್ಯೆ 195 ರ ವಾರ್ಡ್ ಸಮಿತಿಯ ಸಭೆಯನ್ನು ನೋಡೆಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಸಲಾಗಿರುವ ಸಭೆಯ ನಡಾವಳಿಗಳು

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ಮತ್ತು ಸದಸ್ಯರುಗಳ ವಿವರಗಳು**

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ |
|---|---|---|
| 1 | ಶ್ರೀ ಕೆ.ವಿ.ಶಶಿಕುಮಾರ್ | ನೋಡಲ್ ಅಧಿಕಾರಿ/ಕಾರ್ಯಪಾಲಕ ಅಭಿಯಂತರರು |
| 2 | ಶ್ರೀ ರಂಗಸ್ವಾಮಿ ಸ.ಕಂ.ಅ | ಸದಸ್ಯ ಕಾರ್ಯದರ್ಶಿ/ಸಹಾಯಕ ಕಂದಾಯ ಅಧಿಕಾರಿ |
| 3 | ಶ್ರೀ ಮಹೇಶ್.ಜಿ.ಆರ್. | ಅರಣ್ಯ ವೀಕ್ಷಕರು |
| 4 | ಶ್ರೀ.ಮೋಹನ್.ಎನ್ | ಕಿರಿಯ ಆರೋಗ್ಯ ಪರಿವೀಕ್ಷಕರು |
| 5 | ಶ್ರೀ ಮಾರುತಿ ಕೆ.ಎನ್ | ಸಹಾಯಕ ಇಂಜಿನಿಯರ್, ವಾರ್ಡ್ ನಂ.195 |
| 6 | ಶ್ರೀ ಎಸ್ ಆರ್ ನಾಗರಾಜ್ | ಸಹಾಯಕ ಅಭಿಯಂತರರು BWSSB (ಎಸ್-2) |
| 7 | ಶ್ರೀ ಕಿರಣ್ | ಕಿರಿಯ ಅಭಿಯಂತರರು BESCOM (ಎಸ್-6) |
| 8 | ಶ್ರೀ.ಜಿ.ವಿ.ಹೆಬ್ಬಾರ್ | ಸದಸ್ಯರು |
| 9 | ಶ್ರೀ.ಅನಂತ ಪದ್ಮನಾಬ | ಸದಸ್ಯರು |
| 10 | ಶ್ರೀ.ಸದಾಶಿವ | ಸದಸ್ಯರು |
| 11 | ಶ್ರೀ.ನೀರಜ್ ಕುಮಾರ್ | ಸದಸ್ಯರು |
| 12 | ಶ್ರೀ.ಕೆಂಪರಾಜು | ಸದಸ್ಯರು |
| 13 | ಶ್ರೀ.ಪ್ರಕಾಶ್ | ಸದಸ್ಯರು |

**ವಾರ್ಡ್ ಸಮಿತಿಯ ಉದ್ದೇಶ ಮತ್ತು ಸಭೆಯ ಮಹತ್ವವನ್ನು ತಿಳಿಸಿ ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಲಯಿತು.**

1. ಹಿಂದಿನ ಸಭೆಯ ನಡವಳಿಗಳಲ್ಲಿದ್ದ ವಿಷಯಕ್ಕೆ ತೆಗೆದುಕೊಂಡ ಕ್ರಮದ ಬಗ್ಗೆ ಸಭೆಯಲ್ಲಿ ಓದಲಾಯಿತು.
2. ಇಂದಿನ ಸಭೆಯಲ್ಲಿ ಮಾನ್ಯ ಅಧ್ಯಕ್ಷರ ಸಮ್ಮುಖದಲ್ಲಿ ಚರ್ಚಿಸಿದ ವಿಷಯಗಳು

| ಕ್ರಮ ಸಂಖ್ಯೆ | ವಿಷಯಗಳು | ನಿರ್ಣಯ | ಕ್ರಮ ತೆಗೆದುಕೊಳ್ಳಬೇಕಾದ ಅಧಿಕಾರಿ |
|---|---|---|---|
| 1 | ವಾರ್ಡ್ ಸಮಿತಿ ಸಭೆಗೆ ಸಂಬಂಧಪಟ್ಟ ಅಧಿಕಾರಿಗಳು ಸಭೆಗೆ ಗೈರುಹಾಜರಾಗಿರುವ ಬಗ್ಗೆ ಅಧ್ಯಕ್ಷರು ಗಮನಿಸಲಾಯಿತು | ಈ ಬಗ್ಗೆ ಅಧ್ಯಕ್ಷರು ವಿಷಾದ ವ್ಯಕ್ತಪಡಿಸಿ ಮುಂದಿನ ವಾರ್ಡ್ ಕಮಿಟಿ ಸಭೆಗೆ ತಪ್ಪದೆ ಹಾಜರಾಗುವಂತೆ ಎಲ್ಲಾ ಇಲಾಖೆಗೆ ಪತ್ರ ಮುಖಾಂತರ ಸೂಚಿಸಲು ಸಭೆಗೆ ತಿಳಿಸಲಾಯಿತು. | ಕಾರ್ಯದರ್ಶಿಗಳು (ಸಹಾಯಕ ಕಂದಾಯ ಅಧಿಕಾರಿಗಳು) |
| 2 | ವಾರ್ಡಿನ ವ್ಯಾಪ್ತಿಯಲ್ಲಿ ಬೀದಿ ದೀಪಗಳ ದೂರುಗಳನ್ನು ಸಮರ್ಪಕವಾಗಿ ನಿರ್ವಹಣೆ ಆಗದಿರುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು | ಬೀದಿ ದೀಪಗಳ ನಿರ್ವಹಣೆ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ಹಾಜರಿದ್ದ ಬೆಸ್ಕಾಂ ಮೇಲ್ವಿಚಾರಕರಿಗೆ ತಿಳಿಸಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ಎಸ್-12 ಉಪ ವಿಭಾಗ |

Scanned with CamScanner